**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಅಸಲು ದಾವೆ ಸಂಖ್ಯೆ 750/2023**

**ಪಿ.ಡಬ್ಲ್ಯುಃ 2**

**ದಿನಾಂಕಃ 10.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಪರ: ಶ್ರೀ. ಕೆ.ಎಸ್.ಆರ್. ವಕೀಲರಿಂದಃ–**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

ನಿಪಿ.2 ರ ಕ್ರಯ ಕರಾರು ಒಪ್ಪಂದದ ಪತ್ರದ ಬಿಕ್ಲಂದಾರನಾಗಿ ಸಹಿ ಮಾಡಿದ್ದು, ಸದರಿ ಪತ್ರವನ್ನು ನಾನು ದಿನಾಂಕ 14.03.2022 ರಂದು ತಯಾರು ಮಾಡಿಕೊಟ್ಟಿರುತ್ತೇನೆ. ಸದರಿ ದಿನದಂದು ನನ್ನ ಸಮಕ್ಷಮ ಪ್ರತಿವಾದಿಯು ವಾದಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ರೂ.5,00,000/– ಗೆ ಮಾರಾಟ ಮಾಡಲು ಒಪ್ಪಿ ಮುಂಗಡವಾಗಿ ರೂ.4,50,000/– ಹಣವನ್ನು ನನ್ನ ಸಮಕ್ಷಮ ವಾದಿಯು ಪ್ರತಿವಾದಿಗೆ ನೀಡಿದ್ದು ಅದಕ್ಕೆ ಸಾಕ್ಷಿದಾರರಾಗಿ ವೀರೇಶ ಮತ್ತು ಸೋಮಶೇಖರ ಎಂಬುವವರು ಸಹಿ ಮಾಡಿರುತ್ತಾರೆ. ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ನಿಪಿ.2 ರ ದಾಖಲೆಯಲ್ಲಿ ವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ನಿಪಿ.2 ರ ದಾಖಲೆಯಲ್ಲಿ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು.

**(ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.